ಕುರುಡ ಬೇಟೆಗಾರ

ಕ್ರಿಸ್ಟಿನಾ ರೋಡನಾಸ



ಕುರುಡ ಬೇಟೆಗಾರ

ಲೇಖನ, ಚಿತ್ರ ಮತ್ತು ವಿನ್ಯಾಸಃ ಕ್ರಿಸ್ಟಿನಾ ರೋಡನಾಸ

ಕನ್ನಡಕ್ಕೆ ಪ್ರಭಾಕರ ನಾನಾವಟಿ



ಲೇಖಿಕೆಯ ಸಂಕ್ಷಿಪ್ತ ಟಿಪ್ಪಣಿ

ಅಲೆಕ್ಝಾಂಡರ ಮ್ಯಕಾಲ್ ಸ್ಮೃಥ ಇವರ ಚಿಲ್ಡ್ರನ್ ಆಫ್ ವ್ಯಾಕ್ಸ ಈ ಆಫ್ರಿಕೆಯಲ್ಲಿಯ ಕತೆಗಳ ಸಂಗ್ರಹದಲ್ಲಿಯ ಒಂದು ಕತೆಯ ಸಂದರ್ಭವು ಕುರುಡ ಬೇಟೆಗಾರ ಈ ಕತೆಗೆ ಪ್ರೇರಣೆ ದೊರೆತಿದೆ.

ಆಫ್ರಿಕೆಯ ದಕ್ಷಿಣ ಪ್ರದೇಶದಲ್ಲಿಯ ಈ ಕತೆ ಇದೆ. ಇದರಲ್ಲಿಯ ಪಾತ್ರಗಳಲ್ಲಿಯ ಹೆಸರುಗಳೆಲ್ಲ ಅಲ್ಲಿ ಮಾತನಾಡುವ 'ಶೋನಾ' ಎಂಬ ಭಾಷೆಯ ಮೇಲೆ ಆಧರಿಸಿವೆ. 'ಚಿರೊಬೊ' ಇದರ ಅರ್ಥ ಮಾತುಗಾರ ಮತ್ತು ಕಾಡು ಪ್ರಾಣಿಗಳನ್ನು ಬಲೆಯಲ್ಲಿ ಹಿಡಿಯುವವರನ್ನು ಮ್ಯುತಾಯೆ ಎಂದು ಇದೆ.

ಈ ಕತೆಯಲ್ಲಿಯ ಮಹತ್ವದ ಸಂದೇಶವು ಉಳಿದ ಎಷ್ಟೋ ದೇಶಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಬೆಳೆದ ಮಕ್ಕಳವರೆಗೆ ಮುಟ್ಟುವದು ಮತ್ತು ಅವರಿಗೆಲ್ಲ ಸೇರುವದು ಎಂದು ನನಗೆ ಅನ್ನಿಸುತ್ತದೆ.

ಕ್ರಿಸ್ಟಿನಾ ರೋಡನಾಸ

ಕೆಲ ವರುಷಗಳ ಹಿಂದೆ ಆಫ್ರಿಕೆಯ ದುಂಡಗಿನ ಆಕಾರದ ಗುಡಿಸಲುಗಳಿರುವ ಒಂದು ಹಳ್ಳಿಯಲ್ಲಿ ಚಿರೊಬೊ ಎಂಬವನು ಒಬ್ಬನೇ ತನ್ನ ಗುಡಿಸಲಿನಲ್ಲಿ ಇರುತ್ತಿದ್ದನು. ಅವನು ತನ್ನ ತೋಟದಲ್ಲಿ ಸೂರ್ಯಕಾಂತಿ, ಕುಂಬಳಕಾಯಿ ಮತ್ತು ಗೋವಿನ ಜೋಳ ಇಂತಹ ಬೆಳೆಗಳನ್ನು ಬೆಳೆಸುತ್ತಿದ್ದನು. ಅವುಗಳನ್ನು ಬೆಳೆಸುವಾಗ ಆತ ಹಾಡುಗಳನ್ನು ಹಾಡುತ್ತಿದ್ದನು. ಅವನ ಇಂಪಾದ ಹಾಡುಗಳನ್ನು ಕೇಳಲು ಬೇರೆ ಬೇರೆ ಬಣ್ಣದ ಎಷ್ಟೋ ಹಕ್ಕಿಗಳು ಅವನಲ್ಲಿಗೆ ಬರುತ್ತಿದ್ದವು.

ಚಿರೊಬೊ ಜಾಣ ಮತ್ತು ದಯಾಳು ಎಂದು ಹೆಸರುಗಳಿಸಿದವನು. ಸುತ್ತಮುತ್ತಲಿನ .ಜನರೆಲ್ಲ ತಮ್ಮ ಸಮಸ್ಯೆಗಳ ಬಗ್ಗೆ ಅವನ ಜತೆ ಚರ್ಚಿಸುತ್ತಿದ್ದರು. ಆತನು ಕೊಟ್ಟ ಸಲಹೆ ಯೋಗ್ಯವಾಗಿರುತ್ತದೆ, ಎಂದು ಎಲ್ಲರೂ ನಂಬಿದ್ದರು. .ಮಕ್ಕಳು ಅವನಲ್ಲಿಗೆ ಬಂದಾಗ ಆತನು ತನ್ನ ಕೈಯಲ್ಲಿದ್ದ ಕೆಲಸ ಬಿಟ್ಟು ಅವರು ಹೇಳುತ್ತಿದ್ದ ಕತೆಗಳನ್ನು ಕೇಳುತ್ತಿದ್ದನು. ಮತ್ತು ಅವರ ಜತೆ ನಲಿದಾಡುತ್ತ, ನಗುತ್ತ ವೇಳೆ ಕಳೆಯುತ್ತಿದ್ದನು.

ಎಲ್ಲರಿಗೂ ಕನಿಕರ ತೋರಿಸುವ ಅವನು ಯಾವಾಗಲು ನಗುಮುಖದಿಂದ ಇರುತ್ತಿದ್ದದ್ದರಿಂದ ಹಳ್ಳಿಗರಿಗೆಲ್ಲ ಆತನು ಸೇರುತ್ತಿದ್ದನು. ಅವನಿಗೆ ಕಣ್ಣಿನಿಂದ ಕಾಣುವದಿಲ್ಲ ಎಂಬ ಸಂಗತಿಯ ಕಡೆಗೆ ಎಲ್ಲರೂ ದುರ್ಲಕ್ಷಿಸುತ್ತಿದ್ದರು.





ಒಂದು ದಿನ ಚಿರೊಬೊ ಅಡಿಗೆ ಮಾಡುತ್ತಿದ್ದಾಗ ಹೊರ ಊರಿನ ಒಬ್ಬನು ಅವನ ತೋಟವನ್ನು ಕೌತುಕದಿಂದ ನೋಡುತ್ತ ನಿಂತಿದ್ದನು. "ನಿನ್ನ ತೋಟದಲ್ಲಿಯ ಬೆಳೆಗಳು ಚೆನ್ನಾಗಿ ಇವೆ ಅಲ್ಲದೆ ಅವು ಸಾಕಷ್ಟು ಹುಲುಸಾಗಿ ಬೆಳೆದಿವೆ!" ಎಂದು ಬಾಯಿತುಂಬ ಹೊಗಳಿದನು. ಚಿರೊಬೊನಿಗೆ ಅವನ ಉದ್ಗಾರ ಕೇಳಿ ಹೆಮ್ಮೆಯಿಂದ ಎದೆ ತುಂಬಿ ಬಂದಿತು. "ನೀವು ಬಹು ದೂರದಿಂದ ಬಂದಿರಬೇಕು!" ಎಂದು ಪ್ರಶ್ನಿಸಿದನು. "ನಾನು ಬೇಟೆಯಾಡಲು ಬಂದಿದ್ದೇನೆ." ಎಂದು ಆ ಅತಿಥಿಯು ಹೇಳಿದನು. ಆ ಅತಿಥಿಯ ಹೆಸರು ಮ್ಯುತಾಯೆ ಮತ್ತು ಅವನ ಊರು ಪಶ್ಚಿಮ ದಿಕ್ಕಿನಲ್ಲಿಯ ಅರ್ಧ ದಿವಸದ ನಡಿಗೆಯಷ್ಟು ದೂರ.

"ನಾನು ಮನೆಗೆ ಹೋದಾಗ ನನ್ನ ಚೀಲದಲ್ಲಿಯ ಕೊಬ್ಬಿದ ಹಕ್ಕಿ ನೋಡಿ ಇಡೀ ಊರೆಲ್ಲ ನನ್ನನ್ನು ಕೌತುಕದಿಂದ ನೋಡುವದು." ಎಂದು ಎದೆ ತಟ್ಟಿ ಗರ್ವದಿಂದ ಹೇಳಿದನು.

"ನನಗೆ ಚೆನ್ನಾಗಿ ಕಾಣುತ್ತಿದ್ದಾಗ ನಾನು ಕೂಡ ಬೇಟೆಗಾರನಾಗಿದ್ದೆ." ಚಿರೊಬೊ ಹೇಳತೊಡಗಿದನು, "ನೀವು ಕೆಲ ಸಮಯ ಇಲ್ಲಿಯೇ ಕುಳಿತುಕೊಳ್ಳಿ. ನಾನು ಮಾಡಿದ ತಿಂಡಿಯ ಸವಿ ನೋಡಿ. ಈ ವೇಳೆಯಲ್ಲಿ ನಮಗೆ ಹರಟೆ ಹೊಡೆಯಲು ಕೂಡ ಶಕ್ಯವಾಗಬಹುದು."

ಮ್ಯುತಾಯೆಗೆ ಈ ಕಲ್ಪನೆ ಹಿಡಿಸಿತು. ಆತನು ಚಿರೊಬೊನ ಹತ್ತಿರ ಒಲೆಯ ಮುಂದೆ ಬಂದು ಕುಳಿತನು. ಅವರಿಬ್ಬರು ಎಷ್ಟೋ ಗಂಟೆ ನಗೆದಾಡುತ್ತ ಮತ್ತು ಹಾಡುತ್ತ ವೇಳೆ ಕಳೆದರು.



ಮುಗಿಲಲ್ಲಿದ್ದ ಚಂದ್ರನು ದೂರದಲ್ಲಿದ್ದ ಗಿಡದ ತುತ್ತತುದಿಯನ್ನು ಮುಟ್ಟಿದ್ದನು. ಅತಿಥಿಯು ಎದ್ದು ನಿಂತು "ಗೆಳೆಯನೇ, ನಿನ್ನ ಆದರಾತಿಥ್ಯಕ್ಕೆ ನಾನು ತುಂಬ ಋಣಿ. ನಿನ್ನ ಸಲುವಾಗಿ ನನಗೆ ಏನಾದರೂ ಮಾಡಬೇಕೆನ್ನಿಸುತ್ತದೆ. ಏನು ಮಾಡಲಿ? ಹೇಳು." ಎಂದು ಕೇಳಿದನು.

ಚಿರೊಬೊ ಸ್ವಲ್ಪ ವೇಳೆ ವಿಚಾರ ಮಾಡಿದನು. "ನನಗೆ ನಿನ್ನ ಜತೆ ಬೇಟೆಯಾಡಲು ಹೋಗುವದು ಸೇರುತ್ತದೆ," ಎಂದು ಉತ್ತರಿಸಿದನು.

ಮ್ಯುತಾಯಿ ಮುಗುಳು ನಗುತ್ತ "ಯಾರ ಕಣ್ಣುಗಳು ಕಾಣುವದಿಲ್ಲವೋ ಅಂತಹರ ಜತೆ ಬೇಟೆಯಾಡಲು ಹೋಗುವದು ನನಗೆ ಸರಿಬರಲಾರದು ." ಎಂದು ಹೇಳಿದನು.

"ನಿಮಗೆ ನನ್ನಿಂದ ಎಳ್ಳಷ್ಟು ತೊಂದರೆಯಾಗಲಾರದು. ನನಗೆ ಕಣ್ಣುಗಳನ್ನು ಬಿಟ್ಟರೆ ಉಳಿದ ರೀತಿಯಿಂದ ನೋಡಲು ಬರುತ್ತದೆ." ಎಂದು ಹೆಮ್ಮೆಯಿಂದ ಹೇಳಿದನು.

"ಹಾಗಿದ್ದರೆ ಅಡ್ಡಿಯಿಲ್ಲ. ನಾವು ನಾಳೆ ಬೆಳಿಗ್ಗೆ ಸೂರ್ಯೋದಯವಾಗುವಾಗ ಬೇಟೆಗೆ ಹೋಗುವ. ನಿನಗೂ ನಾನು ಒಂದು ಬಲೆ ಕೊಡುತ್ತೇನೆ. ಅದರಲ್ಲಿ ಸಿಕ್ಕ ಬೇಟೆ ನಿನಗೇನೆ," ಮ್ಯುತಾಯಿ ಹೇಳಿದನು.

ಮರು ದಿನ ಬೆಳಗಾಗುತ್ತಲೇ ಇಬ್ಬರು ಅಡವಿಯಲ್ಲಿ ಬೇಟೆಗಾಗಿ ಹೊರಟರು. ಮ್ಯುತಾಯೆ ಒಂದು ಉದ್ದವಾದ ಬಡಿಗೆಯ ತುದಿಯನ್ನು ಹಿಡಿದುಕೊಂಡು ಮುಂದೆ ಹೋಗುತ್ತಿದ್ದನು. ಆ ಬಡಿಗೆಯ ಎರಡನೇ ತುದಿಯನ್ನು ಚಿರೊಬೊ ಹಿಡಿದುಕೊಂಡು ಅವನ ಹಿಂದೆ ಹೋಗುತ್ತಿದ್ದನು. ಅಂಕು ಡೊಂಕಾದ ಮತ್ತು ಗಿಡಗಂಟೆಗಳಿಯಲ್ಲಿಯ ಚಿಕ್ಕದಾರಿಯ ಮೇಲಿಂದ ಅವರಿಬ್ಬರು ಹೋಗುತ್ತಿದ್ದರು.



ಒಮ್ಮೆಲೆ ಚಿರೊಬೊ ತನ್ನ ಕೈಯಲ್ಲಿಯ ಬಡಿಗೆಯನ್ನು ಎಳೆದನು. ಒಂದು ಮೂರ್ತಿಯಂತೆ ಆತನು ನಿಂತು ಬಿಟ್ಟನು. ಎರಡೂ ಕೈಗಳನ್ನು ಕಿವಿಗಳ ಮೇಲಿಟ್ಟು ಲಕ್ಷಗೊಟ್ಟು ಆಲಿಸತೊಡಗಿದನು. "ಈಗ ನಮಗೆ ಬಹಳ ಎಚ್ಚರಿಕೆಯಿಂದ ನಡೆಯಬೇಕಾಗುವದು." ಆತನು ಮೆಲ್ಲಗಿನ ದನಿಯಲ್ಲಿ ಹೇಳಿದನು. "ಇಲ್ಲಿಯೇ ಎಲ್ಲಿಯಾದರೂ ಚಿರತೆ ಇದೆ."
ಮ್ಯುತಾಯಿ ಎಲ್ಲ ಬದಿಗೂ ಎಚ್ಚರಿಕೆಯಿಂದ ನೋಡತೊಡಗಿದನು. ಆತನಿಗೆ ಚಿರತೆ ಕಾಣಲಿಲ್ಲ. ಕತ್ತೆತ್ತಿ ಮೇಲೆ ನೋಡಿದಾಗ ಮಸುಕಾದ ಒಂದು ಆಕೃತಿ ಅವನ ನೋಟವನ್ನು ಸೆಳೆಯಿತು.

ದಾರಿಯಲ್ಲಿಯ ಒಂದು ಮುಳ್ಳಿನ ಕಂಟಿಯ ಟೊಂಗೆಯ ಮೇಲೆ ಚಿರತೆ ಮಲಗಿತ್ತು. ಚಿರತೆಯಿಂದ ಸಾಕಷ್ಟು ದೂರದವರೆಗೆ ಹೊದ ಮೇಲೆ "ನಿನ್ನ ಕಣ್ಣಿನೆದುರು ಯಾವಾಗಲು ಕತ್ತಲೆ ಇರುತ್ತದೆ. ಆದರೂ ಚಿರತೆ ಅಲ್ಲಿದ್ದದ್ದು ನಿನಗೆ ಹೇಗೆ ತಿಳಿಯಿತು ?" ಅಚ್ಚರಿಪಟ್ಟು ಆತ ಕೇಳಿದನು.

"ನಾನು ನನ್ನ ಕಿವಿಯಿಂದ ಕೂಡ ನೋಡಬಹುದು." ಆತ ಹೇಳಿದನು.



ಸ್ವಲ್ಪ ಸಮಯ ಇಬ್ಬರು ದಟ್ಟವಾದ ಅಡವಿಯಲ್ಲಿಂದ ಹೋಗತೊಡಗಿದರು. ಸಪ್ಪಳ ಮಾಡುತ್ತ ಹರಿಯುತ್ತಿರುವ ಹೊಳೆಯ ಜತೆ ಸೂಸಾದ ಗಾಳಿ ಕೂಡ ಬೀಸುತ್ತಿತ್ತು. ಚಿರೊಬೊ ಮತ್ತೊಮ್ಮೆ ಬಡಿಗೆಯನ್ನು ಜಗ್ಗಿದನು. ಮತ್ತು ನಿಂತಲ್ಲಿಯೇ ನಿಂತು ಬಿಟ್ಟನು. ಕತ್ತನ್ನು ಒಂದೆಡೆ ಮಾಡಿ ದೀರ್ಘವಾದ ಉಸಿರು ಬಿಟ್ಟನು.

“ನಮಗೀಗ ಹೆಚ್ಚು ಎಚ್ಚರಿಕೆಯಿಂದ ಇರಬೇಕಾಗುವದು. ಸಮೀಪದಲ್ಲಿಯೇ ಅಡವಿಹಂದಿಗಳ ಗುಂಪು ಇರಬಹುದು.” ಚಿರೊಬೊ ಎಚ್ಚರಿಕೆ ಕೊಟ್ಟನು.

ಮ್ಯುತಾಯೆ ಸುತ್ತಲು ಎಲ್ಲ ಬದಿಗೂ ನೋಡಿದನು. ಏನೂ ಕಾಣಲಿಲ್ಲ.

ಆತನು ಸಮೀಪದ ಒಂದು ದಿನ್ನೆಯನ್ನು ಹತ್ತಿ ನೋಡತೊಡಗಿದನು. ಗಿಡಗಂಟಿಗಳ ಸಂದಿಯಲ್ಲಿ ಇಣಿಕಿ ಹಾಕಿ ನೋಡಿದನು. ಅಲ್ಲಿ ಕಾಡುಹಂದಿಗಳ ಗುಂಪು ಓಡುತ್ತಿರುವದನ್ನು ನೋಡಿದಾಗ ಆತನಿಗೆ ಅಚ್ಚರಿಯಾಯಿತು. ಅವುಗಳ ಕೊಂಬುಗಳು ಸೂರ್ಯಪ್ರಕಾಶದಲ್ಲಿ ಮಿಂಚುತ್ತಿದ್ದವು.

ಕಾಡುಹಂದಿಗಳು ದೂರ ಹೋದ ಮೇಲೆ ಮ್ಯುತಾಯೆ, “ನಿನಗೆ ಕಣ್ಣು ಕಾಣುವದಿಲ್ಲ. ಆದರೂ ನಿನಗೆ ಕಾಡುಹಂದಿಗಳ ಗುಂಪು ಇದ್ದದ್ದು ಹೇಗೆ ತಿಳಿಯಿತು?” ಎಂದು ಕೇಳಿದನು.

ಕುರುಡ ಬೇಟೆಗಾರ ಮುಗುಳು ನಗುತ್ತ “ನನಗೆ ಮೂಗಿನಿಂದಲೂ ಕಾಣುತ್ತದೆ.” ಎಂದು ಹೇಳಿದನು.



ಸಾಕಷ್ಟು ಗಿಡ ಗಂಟಿಗಳ ಮತ್ತು ಕಾಡುಹೂವುಗಳ ಹಬ್ಬಿದ ವಾಸನೆ ಇರುವ ಒಂದು ಕೊಳ್ಳದಲ್ಲಿ ಅವರು ಹೋಗುತ್ತಿದ್ದರು. ಮತ್ತೊಮ್ಮೆ ಆತನು ಬಡಿಗೆಯನ್ನು ಜಗ್ಗಿ ನಿಂತು ಬಿಟ್ಟನು. ತನ್ನ ಎರಡೂ ಕೈಗಳನ್ನು ನೆಲದ ಮೇಲೆ ಊರಿ ಅಂಬೆಗಾಲಿಟ್ಟು ನೋಡತೊಡಗಿದನು.

"ಎಚ್ಚರದಿಂದ ಇರಬೇಕು. ಖಡ್ಗಮೃಗಗಳು ಇತ್ತ ಕಡೆಗೆನೇ ಬರುತ್ತಲಿವೆ."
ಚಿರೊಬೊ ಮೆಲ್ಲಗಿನ ದನಿಯಲ್ಲಿ ಹೇಳಿದನು.

ಮ್ಯುತಾಯೆಗೆ ಸುತ್ತಮುತ್ತಲು ನೋಡಿದಾಗ ಖಡ್ಗಮೃಗಗಳು ಕಾಣಲಿಲ್ಲ.

ಒಂದಿಷ್ಟು ದಿಟ್ಟಿಸಿ ನೋಡಲು ಗಿಡಗಳ ಟೊಂಗೆಗಳನ್ನು ಮೆಲ್ಲಗೆ ಸರಿಸಿ ಇನ್ನೊಮ್ಮೆ ಇಣುಕಿ ನೋಡಿದನು. ಆಲ್ಲಿಯ ಹುಲ್ಲಿನಲ್ಲಿ ಎರಡು ಖಡ್ಗಮೃಗಗಳು ಓಡುತ್ತ ಹೋಗುತ್ತಿರುವದನ್ನು ಆತನು ಕಂಡನು.

ಇಬ್ಬರು ಬೇಟೆಗಾರರು ಖಡ್ಗಮೃಗಗಳಿಂದ ತುಸು ದೂರ ಹೋದ ಮೇಲೆ ತರುಣ ಬೇಟೆಗಾರನು ತನ್ನ ಗೆಳೆಯನೆದುರಿಗೆ ನಿಂತು ಕೇಳಿದನು, "ಯಾರ ಕಣ್ಣುಗಳ ಮಂದೆ ಕತ್ತಲೆ ಕವಿದಿರುತ್ತದೆಯೋ ಅವರಿಗೆ ಖಡ್ಗಮೃಗಗಳು ಓಡಿ ಹೋಗುತ್ತಿರುವದನ್ನು ಕಾಣಲು ಹೇಗೆ ಸಾಧ್ಯ?"
ಚಿರೊಬೊನು ಶಾಂತ ಚಿತ್ತದಿಂದ ಉತ್ತರಿಸಿದನು, "ನನಗೆ ನನ್ನ ತ್ವಚೆಯಿಂದ ಹೇಗೆ ನೋಡಬೇಕು ಎಂಬುದು ತಿಳಿಯುತ್ತದೆ."



ಬೇಟೆಗಾರರಿಬ್ಬರು ಕೊಳ್ಳದ ಕೆಳಗಿರುವ ಕೆರೆಯ ಹತ್ತಿರ ಬಂದು ನಿಂತರು. ದಂಡೆಯ ಕೆಸರಿನಲ್ಲಿ ನೂರಾರು ಹಕ್ಕಿಗಳ ಹೆಜ್ಜೆಗಳು ಮೂಡಿದ್ದವು.

“ಪಕ್ಷಿಗಳೆಲ್ಲ ಇಲ್ಲಿ ನೀರು ಕುಡಿಯಲಿಕ್ಕೆ ಬರುತ್ತಿರಬಹುದು. ಬಲಿಯನ್ನು ಕಟ್ಟುವ ಯೋಗ್ಯವಾದ ಸ್ಥಳವಿದು.”. ಎಂದು ಮ್ಯುತಾಯೆ ಹೇಳಿದನು.

ಅವನ ಗೆಳೆಯನು ಸೂಚಿಸಿದಂತೆ ಚಿರೊಬೊ ಕೆರೆಯ ದಂಡೆಯ ಒಂದು ಬದಿಗೆ ತನ್ನ ಜಾಲವನ್ನು ಕಟ್ಟಿದನು. ತರುಣ ಗೆಳೆಯನು ತನ್ನ ಜಾಲವನ್ನು ತುಸು ದೂರದಲ್ಲಿ ಕಟ್ಟಿದನು. ಎರಡು ಬಲೆಗಳು ಸುಲಭವಾಗಿ ಕಾಣದಂತೆ ಅವುಗಳ ಮೇಲೆ ಎಲೆಗಳನ್ನು ಹೊದಿಸಿದರು. ಮ್ಯುತಾಯೆ “ನಾವಿಲ್ಲಿ ಸಮೀಪದಲ್ಲಿಯೆ ರಾತ್ರಿ ಕಳೆದು ಮುಂಜಾನೆ ಬರುವ. ನಮಗೆ ಏನು ಸಿಗುತ್ತದೆ ಎಂಬುದನ್ನು ನೋಡುವ.” ಎಂದು ಹೇಳಿದನು.

ಆ ರಾತ್ರಿ ಇಬ್ಬರು ಸಾಕಷ್ಟು ವೇಳೆ ಹರಟೆ ಹೊಡೆದರು. ಮ್ಯುತಾಯೆಗೆ ಈ ಕುರುಡ ಮುದುಕನ ಬಗ್ಗೆ ಸಾಕಷ್ಟು ಪ್ರೀತಿ ಉಂಟಾಗಿತ್ತು. ಎಷ್ಟೋ ವರುಷಗಳ ವರೆಗೆ ಅವನ ಮನಸ್ಸಿನಲ್ಲಿ ಕಾಡುವ ಪ್ರಶ್ನೆ ಗಳನ್ನು ಆತನು ಕೇಳಿದನು.

ಮರು ದಿನ ಮುಂಜಾನೆ ತಾವು ಕಟ್ಟಿದ ಜಾಲಗಳ ಹತ್ತಿರ ಅವರಿಬ್ಬರು ಬಂದರು. ಅವರ ಬೇಟೆಯ ಹಂಚು ಯಶಸ್ವಿಯಾಗಿತ್ತೆಂಬುದು ಚಿರೊಬೊನಿಗೆ ತಿಳಿಯಿತು. ಅವನು ಉತ್ಸಾಹಿತನಾಗಿ "ನಮ್ಮ ಜಾಲಗಳಲ್ಲಿ ಹಕ್ಕಿಗಳು ಸಿಕ್ಕಿ ಬಿದ್ದಿವೆ. ಅವುಗಳ ದನಿ ನನಗೆ ಕೇಳಿಸುತ್ತಲಿದೆ." ಎಂದು ಹೇಳಿದನು.

ತರುಣ ಬೇಟೆಗಾರ ತಾನು ಬೀಸಿದ ಜಾಲವನ್ನು ನೋಡಿದನು. ಅದರಲ್ಲಿ ಒಂದು ಸಾಕಷ್ಟು ಸೊರಗಿದ ಚಿಕ್ಕ ಹಕ್ಕಿ ಇದ್ದದ್ದನ್ನು ನೋಡಿ ಆತ ನಿರಾಶನಾದನು. ಆ ಹಕ್ಕಿಯನ್ನು ನಿದಾನವಾಗಿ ಹೊರತೆಗೆದು ತೊಗಲಿನ ಚೀಲದಲ್ಲಿ ಇಟ್ಟನು. ಆ ಮೇಲೆ ಆತನು ಇನ್ನೊಂದು ಬಲೆಯ ಹತ್ತಿರ ಹೋದನು. .

ಹಣಿಕೆ ಹಾಕಿ ಬಗ್ಗಿಕೊಂಡು ನೋಡಿದಾಗ ಅವನಲ್ಲಿ ಅಸೂಯೆ ಮೂಡಿತು. ಕುರುಡ ಬೇಟೆಗಾರನು ಕಟ್ಟಿದ ಬಲೆಯಲ್ಲಿ ಒಂದು ಮುದ್ದಾದ, ದೊಡ್ಡ ಆಕಾರದ ಬಾತುಕೋಳಿ ಸಿಕ್ಕಿ ಬಿದ್ದಿತ್ತು. ಇದನ್ನು ತಿಂದರೆ ಹಸಿದ ನರಿಯ ಹೊಟ್ಟೆ ಕೂಡ ತುಂಬಬಹುದು.



ಕೆಲ ಕ್ಷಣ ಮ್ಯುತಾಯೆ ಸಂಭ್ರಮದಲ್ಲಿ ಬಿದ್ದನು. ಎರಡೂ ಹಕ್ಕಿಗಳನ್ನು ನೋಡಿ ಅವನ ತಲೆಯಲ್ಲಿ ಬೇರೆ ವಿಚಾರ ಬಂದಿತು. “ಈ ಕುರುಡ ಮುದುಕನ ಕಣ್ಣುಗಳ ಮುಂದೆ ಯಾವಾಗಲು ಕತ್ತಲು. ಅವನಿಗೆ ಯಾವ ಹಕ್ಕಿ ಎಂಬುದು ಕೂಡ ತಿಳಿಯಲಾರದು. ” ಅವನು ಯೋಚಿಸತೊಡಗಿದನು. ಈ ತಿಯಾಗಿ ವಿಚಾರ ಮಾಡುತ್ತ ಕುರುಡನ ಚೀಲದಲ್ಲಿ ಚಿಕ್ಕ ಹಕ್ಕಿಯನ್ನು ಇಟ್ಟನು.

ನಿನಗೆ ದೊರೆತಿರುವ ಹಕ್ಕಿಯು ನನ್ನ ಹಕ್ಕಿಗಿಂತ ದೊಡ್ಡದಿದೆ. ಅದನ್ನು ತಿಂದು ನಿನ್ನ ಹೊಟ್ಟೆ ತುಂಬಬಹುದು. ಹೀಗೆ ಹೇಳುತ್ತ ಆ ಚಿಕ್ಕ ಪಕ್ಷಿಯನ್ನು ಅವನ ಕೈಯಲ್ಲಿಟ್ಟನು.

ಚಿರೊಬೊ ಆ ಹಕ್ಕಿಯ ರೆಕ್ಕೆಗಳ ಮೇಲೆ ಕೈಯಾಡಿಸಿದನು. ಅದರ ತಿಳುವಾದ ಹೊಟ್ಟೆ ಮತ್ತು ಎದೆಯ ಮೇಲೆ ಕೈಯಾಡಿಸಿದನು. ಏನೂ ಮಾತನ್ನಾಡದೆ ಅದನ್ನು ಚೀಲದಲ್ಲಿಟ್ಟನು

ಆ ಮೇಲೆ ತಮ್ಮ ತಮ್ಮ ಜಾಲಗಳನ್ನು ಬಿಡಿಸಿ ಹಳ್ಳಿಗೆ ಹೋಗುವ ದಾರಿಯಲ್ಲಿ ನಡೆಯತೊಡಗಿದರು..



ಅವರಿಬ್ಬರು ಸಾಕಷ್ಟು ವೇಳೆ ಮಾತನ್ನಾಡದೆ ನಡೆಯತೊಡಗಿದರು. ದಣಿವು ಆರಿಸಲೆಂದು ಒಂದು ಮರದ ಕೆಳಗೆ ಕುಳಿತರು. ಮ್ಯುತಾಯಿಗೆ ಹಿಂದಿನ ರಾತ್ರಿಯಲ್ಲಿ ಕೇಳಬೇಕಿದ್ದ ಇನ್ನಷ್ಟು ಪ್ರಶ್ನೆಗಳಿದ್ದವು. ಇದೇ ಗಳಿಗೆಯಲ್ಲಿ ಅವನನ್ನು ಪೀಡೀಸುತ್ತಿರುವ ಒಂದು ಪ್ರಶ್ನೆ ಕೇಳಿದನುಃ
“ಜನರು ತಮ್ಮತಮ್ಮೊಳಗೆ ಏಕೆ ಜಗಳ ಆಡುತ್ತಾರೆ?”

ಅದೆಷ್ಟೋ ಹೊತ್ತು ಚಿರೊಬೊ ವಿಚಾರ ಮಾಡತೊಡಗಿದನು. ಆ ಮೇಲೆ ಮಾತನ್ನಾಡುವಾಗ ಅವನ ದನಿಯಲ್ಲಿ ನೋವು ಇತ್ತು.
ನಿದಾನವಾಗಿ ಆತ ಹೇಳತೊಡಗಿದನು,
“ಯಾವದು ನಮ್ಮದಲ್ಲವೋ ಅದನ್ನು ತೆಗೆದುಕೊಳ್ಳಲಿಕ್ಕೆ ಜನ ಪ್ರಯತ್ನಿಸುತ್ತಾರೆ. ಆದ್ದರಿಂದಲೇ ಜಗಳಗಳು ಉಂಟಾಗುತ್ತವೆ. ನನ್ನ ಜತೆ ಈಗ ನೀನು ಇದನ್ನೇ ಮಾಡಿರುವಿ.”

ಚಿರೊಬೊನ ಉತ್ತರ ಕೇಳಿ ಬೇಟೆಗಾರನಿಗೆ ದಂಗು ಬಡಿದಂತಾಯಿತು. ಅವನ ಮುಖದಿಂದ ಶಬ್ದಗಳೇ ಹೊರ ಬೀಳಲಿಲ್ಲ. ನಾಚಿಕೆಯಿಂದ ತನ್ನ ಚೀಲದಲ್ಲಿಯ ಬಾತುಕೋಳಿಯನ್ನು ಹೊರತೆಗೆದು ಕುರುಡ ಬೇಟೆಗಾರನ ಕೈಯಲ್ಲಿ ಕೊಟ್ಟನು.

ಪಶ್ಚಾತ್ತಾಪದಗ್ಧನಾಗಿ ಮೆಲು ದನಿಯಲ್ಲಿ “ದುಷ್ಟ ಮನುಷ್ಯನಿಗೆ ಆತನ ಗೆಳೆಯನಿಂದ ಕ್ಷಮೆ ಹೇಗೆ ದೊರೆಯಬಹುದು?” ಕೇಳಿದನು.

ಚಿರೊಬೊನ ದೃಷ್ಟಿ ಇಲ್ಲದ ಕಣ್ಣುಗಳು ತರುಣ ಬೇಟೆಗಾರನ ಎದೆಯ ಆಳದಲ್ಲಿ ನೊಡುತ್ತಿದ್ದ ಹಾಗೆ ಕಂಡವು.

ಆ ಮೇಲೆ “ನಿನ್ನ ಹೃದಯದ ಕಣ್ಣುಗಳಿದ ನೋಡಿದಾಗ! ಈಗ ನೀನು ಅದನ್ನೇ ಮಾಡಿರುವೆ!” ಎಂದು ಚಿರೊಬೊ ಹೇಳಿದನು.